# ವಲಸಿಗರು ಹಾಗೂ ನಿರಾಶ್ರಿತರ 110ನೇ ವಿಶ್ವ ದಿನ 2024ಕ್ಕೆ ವಿಶ್ವಗುರು ಫ್ರಾನ್ಸಿಸ್ ಅವರ ಸಂದೇಶ

**(ಭಾನುವಾರ, ಸೆಪ್ಟೆಂಬರ್ 29, 2024)**

**"ದೇವರು ತಮ್ಮ ಜನತೆಯೊಂದಿಗೆ ನಡೆಯುತ್ತಾರೆ"**

**ಒಲವಿನ ಸಹೋದರ ಸಹೋದರಿಯರೇ,**

ಕಳೆದ ಅಕ್ಟೋಬರ್ 29ರಂದು ಧರ್ಮಾಧ್ಯಕ್ಷರುಗಳ 15ನೇ ಸಾಮಾನ್ಯ ಸಾರ್ವತ್ರಿಕ ಸಭೆಯ ಮೊದಲ ಅಧಿವೇಶನ ನಡೆಯಿತು. ಸಿನೋಡಾಲಿಟಿಯು (ಪಯಣಿಸುವ ಧರ್ಮಸಭೆಯ ಎಂಬ ಅರ್ಥ) ಧರ್ಮಸಭೆಯ ಮೂಲಭೂತ ಕರೆಯಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಲು ಈ ಅಧಿವೇಶನವು ನಮಗೆ ಅವಕಾಶವನ್ನು ನೀಡಿತು. ಸಿನೋಡಾಲಿಟಿ ಎಂದರೆ ದೇವರ ಜನತೆ ಜಂಟಿಯಾಗಿ ಹಾಗೂ ಜೊತೆಯಾಗಿ ದೇವರೆಡೆಗೆ ಪಯಣಿಸುವುದು ಎಂದು ಅರ್ಥ ಹಾಗೂ ಧರ್ಮಸಭೆಯ ಸೇವೆಯಲ್ಲಿ ಮತ್ತು ದೇವರ ಸಾಮ್ರಾಜ್ಯ ಆಗಮಿಸುವುದನ್ನು ನಿರೀಕ್ಷಿಸುವ ನಿಟ್ಟಿನಲ್ಲಿ ಸೇವೆ ಸಲ್ಲಿಸುವುದು ಎಂದು ಸಹ ನಾವು ಅರ್ಥೈಸಿಕೊಳ್ಳಬೇಕಿದೆ. (ಸಿಂಥೆಸೀಸ್ ರಿಪೋರ್ಟ್, ಪೀಠಿಕೆ).

ಸಿನೋಡಲ್ ದೃಷ್ಟಿಕೋನದ ಮೇಲೆ ಬೆಳಕು ಚೆಲ್ಲುವುದು ಧರ್ಮ ಸಭೆಯು ತನ್ನ ಪಯಣಿಸುವ ಸ್ವಭಾವವನ್ನು ಮರು ಅನ್ವೇಷಿಸಲು ನೆರವಾಗುತ್ತದೆ. ಏಕೆಂದರೆ, ದೈವ ಜನರು ಸದಾ ಪಯಣಿಸುವವರಾಗಿದ್ದು ಅಥವಾ ದೇವರ ಸಾಮ್ರಾಜ್ಯದೆಡೆಗೆ ವಲಸೆ ಹೋಗುವವರಾಗಿದ್ದಾರೆ (ಲುಮೆನ್ ಜೆಂತ್ಸಿಯುಮ್). ಇಸ್ರಯೇಲರು ಈಜಿಪ್ಟ್ ದೇಶದಿಂದ ತಮ್ಮ ವಾಗ್ದಾತ್ತ ನಾಡಿಗೆ ಪ್ರಯಾಣಿಸುವ ಬೈಬಲ್ ಶ್ರೀಗ್ರಂಥದ ಘಟನೆಯು ಇಲ್ಲಿ ನೆನಪಾಗುತ್ತದೆ: ಗುಲಾಮಗಿರಿಯಿಂದ ಸ್ವಾತಂತ್ರ್ಯದೆಡೆಗಿನ ಈ ಮಹಾ ಪಯಣವು ಧರ್ಮಸಭೆಯು ಪ್ರಭುವಿನೆಡೆಗಿನ ಅಂತಿಮ ಪಯಣದೆಡೆಗೆ ಸಾಗುತ್ತಿರುವುದನ್ನು ಸೂಚಿಸುತ್ತದೆ.

ಇದೇ ರೀತಿ ಇಂದಿನ ವಲಸಿಗರಲ್ಲಿಯೂ ಸಹ, ನಾವು ಎಂದಿನಂತೆ, ತಮ್ಮ ತಾಯ್ನಾಡಿಗೆ ಮರಳಲು ಇರುವ ದೈವ ಜನರ ಜೀವಂತ ಪ್ರತಿಬಿಂಬವನ್ನು ಕಾಣಬುದಾಗಿದೆ. "ನಮ್ಮ ನಾಗರೀಕತ್ವ ಎಂಬುದು ಸ್ವರ್ಗದಲ್ಲಿದೆ; ಅಲ್ಲಿಂದಲೇ ನಾವು ನಮ್ಮ ರಕ್ಷಕ ಹಾಗೂ ಪ್ರಭುವಾದ ಕ್ರಿಸ್ತರನ್ನು ನೀರೀಕ್ಷಿಸುತ್ತಿದ್ದೇವೆ" ಎಂಬುದನ್ನು ಇವರ ಭರವಸೆಯ ಪಯಣವೆಂಬುದು ನಮಗೆ ನೆನಪಿಸುತ್ತದೆ. (ಫಿಲಿಪ್ಪಿ 3:20).

ಬೈಬಲ್ ಶ್ರೀಗ್ರಂಥದ ವಿಮೋಚನಾಕಾಂಡದ ಘಟನೆಗಳು ಹಾಗೂ ವಲಸಿಗರಲ್ಲಿ ಹಲವು ಸಾಮ್ಯತೆಗಳನ್ನು ಕಾಣಬಹುದಾಗಿದೆ. ಮೋಶೆಯ ಕಾಲದಲ್ಲಿನ ಇಸ್ರಯೇಲರಂತೆ ಇಂದಿನ ವಲಸಿಗರೂ ಸಹ ದೌರ್ಜನ್ಯ, ವಿದ್ರೋಹ, ಹಿಂಸೆ, ತಾರತಮ್ಯ ಹಾಗೂ ಅಭಿವೃದ್ಧಿಗೆ ಸದವಕಾಶಗಳು ಇಲ್ಲದೆ ಕಾರಣ ಒಂದು ಪ್ರದೇಶವನ್ನು ತೆರೆದು ಮತ್ತೊಂದು ಪ್ರದೇಶಕ್ಕೆ ಹೋಗುತ್ತಾರೆ. ಮರುಭೂಮಿಯಲ್ಲಿ ಅಂದಿನ ಯೆಹೂದ್ಯರು ಅನುಭವಿಸದಂತೆ,

ವಲಸಿಗರೂ ಸಹ ಹಲವು ಅಡೆತಡೆಗಳನ್ನು ಅವರ ಪಯಣದಲ್ಲಿ ಎದುರಿಸುತ್ತಾರೆ:ಅವರು ಹಸಿವು, ಬಾಯಾರಿಕೆಗಳಿಂದ ಬಳಲುತ್ತಾರೆ, ಶ್ರಮ ಹಾಗೂ ರೋಗಗಳಿಂದ ಕಂಗೆಡುತ್ತಾರೆ ಹಾಗೂ ನಿರಾಶೆಯಿಂದ ಅವರು ಶೋಧನೆಗೆ ಒಳಗಾಗುತ್ತಾರೆ.

ಯಾವುದೇ ವಿಮೋಚನೆಯ ಮೂಲ ತತ್ವವೆಂದರೆ ದೇವರು ಸದಾ ಅವರ ಜನತೆಯೊಂದಿಗೆ ಪಯಣಿಸುತ್ತಾರೆ ಮಾತ್ರವಲ್ಲದೆ, ಜನತೆಯಾದ ಅವರ ಮಕ್ಕಳಿಗೆ ಪ್ರತಿ ಕ್ಷಣ ಹಾಗೂ ಪ್ರತಿ ಸಂದರ್ಭದಲ್ಲೂ ಜೊತೆಯಾಗುತ್ತಾರೆ. ಜನತೆಯ ನಡುವೆ ದೇವರ ಇರುವಿಕೆ ಎಂಬುದು ರಕ್ಷಣೆಯ ಇತಿಹಾಸದ ಧೃಡೀಕರಣವೇ ಆಗಿದೆ: "ನಿಮ್ಮ ದೇವರಾದ ಸರ್ವೇಶ್ವರನೇ ನಿಮ್ಮ ಸಂಗಡ ಇರುತ್ತಾರೆ; ಅವರು ನಿಮ್ಮನ್ನು ಕೈಬಿಡುವುದಿಲ್ಲ." (ಧರ್ಮೋ 31:6). ಈಜಿಪ್ಟಿನಿಂದಾಚೆ ಬಂದೆ ಜನರಿಗೆ ದೇವರು ತಮ್ಮ ಇರುವಿಕೆಯನ್ನು ವಿವಿಧ ರೀತಿಯಲ್ಲಿ ತೋರ್ಪಡಿಸಿದರು: ಮೋಡದ ಕಂಬದಂತೆ ಹಾಗೂ ದಾರಿ ತೋರುವ ಬೆಂಕಿಯಂತೆ (ವಿಮೋ 13:21), ದೇವರ ಇರುವಿಕೆಯನ್ನು ಭೌತಿಕವಾಗಿಸಿ, ಮಂಜೂಷವನ್ನು ರಕ್ಷಿಸಿದ ಸಭೆಯ ಗುಡಾರದಂತೆ (ವಿಮೋ 33:7) ದೈವಿಕ ರಕ್ಷಣೆಯನ್ನು ಸೂಚಿಸುವ ತಾಮ್ರದ ಸರ್ಪ ಕಂಬದಂತೆ (ಸಂಖ್ಯಾ 21:8-9), ಹಸಿವು ಹಾಗೂ ನೀರಡಿಕೆಯಿಂದ ಬಳಲುತ್ತಿರುವ ಜನರಿಗೆ ದೇವರ ಉಡುಗೊರೆಯಂತೆ ಮನ್ನಾ ಮತ್ತು ನೀರು (ವಿಮೋ 16:7). ಗುಡಾರ ಎಂಬುದು ಒಂದು ರೀತಿಯ ದೇವರಿಗೆ ಅತ್ಯಂತ ಪ್ರಿಯವಾದ ಇರುವಿಕೆಯಾಗಿದೆ. ದಾವೀದನ ಆಳ್ವಿಕೆಯಲ್ಲಿ ದೇವರು ಗುಡಾರದಲ್ಲಿ ವಾಸಿಸಲು ಆಯ್ಕೆಮಾಡಿಕೊಂಡರೇ ವಿನಃ ದೇವಾಲಯದಲ್ಲಲ್ಲ; ಏಕೆಂದರೆ ಗುಡಾರದಿಂದ ಗುಡಾರಕ್ಕೆ ಹಾಗೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅವರು ತಮ್ಮ ಜನತೆಯ ಜೊತೆ ನಡೆಯಲು ನಿರ್ಧರಿಸುತ್ತಾರೆ. (1 ಪೂರ್ವಕಾಲ 17:5).

ಅನೇಕ ವಲಸಿಗರು ದೇವರನ್ನು ತಮ್ಮ ಪ್ರಯಾಣದ ಸಂಗಾತಿ, ಮಾರ್ಗದರ್ಶಿ, ಹಾಗೂ ಮುಕ್ತಿಯ ಪಾಲಕರನ್ನಾಗಿ ಆರಿಸಿಕೊಳ್ಳುತ್ತಾರೆ. ಹೊರಡುವ ಮುನ್ನ ತಮ್ಮೆಲ್ಲವನ್ನೂ ದೇವರಿಗೆ ಅರ್ಪಿಸುವ ಅವರು, ಅಗತ್ಯದ ಸಂದರ್ಭದಲ್ಲಿ ದೇವರನ್ನು ಬೇಡುತ್ತಾರೆ. ಬೇಸರದ ಹಾಗೂ ನಿರಾಶೆಯ ಸಂದರ್ಭದಲ್ಲಿ ಇವರು ದೇವರಲ್ಲಿ ತಮ್ಮ ಸಮಾಧಾನವನ್ನು ಕಂಡುಕೊಳ್ಳುತ್ತಾರೆ. ಅವರ ಪ್ರಯಾಣದ ಸಂದರ್ಭದಲ್ಲಿ ಸದಯ ಸಮಾರಿತರೂ ಸಹ ಇರುತ್ತಾರೆ. ಪ್ರಾರ್ಥನೆಯಲ್ಲಿ ತಮ್ಮ ಭರವಸೆಗಳನ್ನು ಅವರು ದೇವರಲ್ಲಿ ಅರಿಕೆ ಮಾಡುತ್ತಾರೆ. ಪ್ರತಿ ಖಂಡದ ಮರುಭೂಮಿಗಳು, ನದಿಗಳು, ಸಮುದ್ರಗಳಲ್ಲಿ ಅದೆಷ್ಟು ಬೈಬಲ್ ಪ್ರತಿಗಳು, ಹೊಸ ಒಡಂಬಡಿಕೆಗಳು, ಜಪಸರಗಳು ಈ ವಲಸಿಗರ ಜೊತೆಗೆ ಪಯಣಿಸಿದೆಯೋ ಆ ದೇವರೇ ಬಲ್ಲ!

ದೇವರು ತನ್ನ ಜನತೆಯೊಂದಿಗೆ ಮಾತ್ರವಲ್ಲ, ಅವರೊಳಗೆಯೂ ಸಹ ಪಯಣಿಸುತ್ತಾರೆ. ಅವರಲ್ಲಿ ವಿಶೇಷವಾಗಿ ಬಡವರು, ನಿರ್ಗತಿಕರು ಹಾಗೂ ಶೋಷಣೆಗೆ ಒಳಗಾಗಿರುವ ಪ್ರತಿ ಪುರುಷ ಹಾಗೂ ಸ್ತ್ರೀಯರೊಳಗೆ ತಮ್ಮನ್ನು ತಾವು ಗುರುತಿಸಿಕೊಂಡು ನಡೆಯುತ್ತಾರೆ. ಈ ರೀತಿಯಲ್ಲಿ ನಾವು ದೇವರು ಮನುಜರಾದ ಪರಮ ರಹಸ್ಯದ ವಿಸ್ತರಣೆಯನ್ನು ಕಾಣುತ್ತೇವೆ.

ಈ ಹಿನ್ನೆಲೆಯಲ್ಲಿ, ಅವಶ್ಯಕತೆಯಲ್ಲಿರುವ ನಮ್ಮ ಇತರೆ ಸಹೋದರ ಸಹೋದರಿಯರನ್ನು ಸಂಧಿಸುವಂತೆ, ವಲಸಿಗರನ್ನು ಸಂಧಿಸುವುದು, ಪ್ರಭು ಕ್ರಿಸ್ತರನ್ನು ಸಂಧಿಸುವುದೇ ಆಗಿದೆ. ಇದನ್ನು ಅವರೇ ಹೇಳಿದ್ದಾರೆ. ಹಸಿವಿನಿಂದ, ಬಾಯಾರಿಕೆಯಿಂದ, ಹೊರಗಿನವನಾಗಿ, ಬಟ್ಟೆಯಿಲ್ಲದೆ, ರೋಗವುಳ್ಳವನಾಗಿ ನಮ್ಮ ಬಾಗಿಲನ್ನು ತಟ್ಟುವುದು ಕ್ರಿಸ್ತರೇ ಆಗಿದ್ದಾರೆ. (ಪ್ರಭೋದನೆ, "ಭಯದಿಂದ ಮುಕ್ತರಾದವರು" ಸಭೆಯಲ್ಲಿ ಭಾಗವಹಿಸಿದವರಿಗೆ ಬಲಿಪೂಜೆ, ಸಾಕ್ರೊಫಾನೋ, ಫೆಬ್ರವರಿ 15, 2019).

ಮತ್ತಾಯನ ಶುಭಸಂದೇಶದ 25ನೇ ಅಧ್ಯಾಯವು ಅಂತಿಮ ತೀರ್ಪಿನ ಕುರಿತು ಸ್ಪಷ್ಟವಾಗಿ ಹೇಳುತ್ತದೆ "ನಾನು ಅಪರಿಚಿತನಾಗಿದ್ದೆ, ನನಗೆ ಆಶ್ರಯ ಕೊಟ್ಟಿರಿ" (ವಚನ 35), "ಈ ನನ್ನ ಸೋದರರರಲ್ಲಿ ಒಬ್ಬನಿಗೆ, ಅವನೆಷ್ಟೇ ಕನಿಷ್ಟನಾಗಿರಲಿ, ನೀವು ಹೀಗೆ ಮಾಡಿದಾಗಲೆಲ್ಲ, ನೀವು ಅದನ್ನು ನನಗೇ ಮಾಡಿದಿರಿ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ವಚನ 40). ಬದುಕಿನ ಹಾದಿಯಲ್ಲಿ ನಾವು ಸಂಧಿಸುವ ಪ್ರತಿ ಭೇಟಿಯೂ ಸಹ ನಮಗೆ ಪ್ರಭುವನ್ನು ಭೇಟಿ ಮಾಡುವ ಸದವಕಾಶವನ್ನು ನೀಡುತ್ತದೆ. ಇದೊಂದು ನಮ್ಮ ರಕ್ಷಣೆ ಹಾಗೂ ಉದ್ಧಾರದ ಸನ್ನಿವೇಷವಾಗಿದೆ ಏಕೆಂದರೆ ನಾವು ಭೇಟಿ ಮಾಡುವ ನೆರವಿನ ಅವಶ್ಯಕತೆಯಲ್ಲಿರುವ ಪ್ರತಿ ಸಹೋದರ ಸಹೋದರಿಯರಲ್ಲಿ ಯೇಸು ಕ್ರಿಸ್ತರೇ ನೆಲೆಸಿದ್ದಾರೆ. ಈ ರೀತಿಯಲ್ಲಿ ಬಡವರು ನಮ್ಮನ್ನು ರಕ್ಷಿಸುತ್ತಾರೆ ಏಕೆಂದರೆ ಅವರು ದೇವರ ಸಮ್ಮುಖವನ್ನು ಕಾಣಲು ನಮಗೆ ನೆರವಾಗುತ್ತಾರೆ. (ಬಡವರ ತೃತೀಯ ವಿಶ್ವದಿನ ಸಂದೇಶ, ನವೆಂಬರ್ 17, 2019).

ಪ್ರೀತಿಯ ಸಹೋದರ ಸಹೋದರಿಯರೇ, ಘನತೆಯ ಬದುಕನ್ನು ಅರಸುತ್ತಾ ತಮ್ಮ ತಾಯ್ನಾಡನ್ನು ತೊರೆಯಬೇಕಾಗಿ ಬಂದ ಎಲ್ಲರಿಗಾಗಿ ಒಂದಾಗಿ ಪ್ರಾರ್ಥಿಸೋಣ. ನಾವು ಅವರೊಂದಿಗಿರೋಣ. "ಪಯಣಿಸುವ ಧರ್ಮಸಭೆಯಾಗಿ" ಒಂದಾಗಿ ನಡೆಯೋಣ ಹಾಗೂ ಮುಂಬರಲಿರುವ ಸಿನೋಡಲ್ ಅಧಿವೇಶನವನ್ನೂ ಸಹ ನೆನಪಿಸಿಕೊಂಡು, ದೇವರಿಗೆ ಅರ್ಪಿಸೋಣ. ದೈವ ಜನರು ಒಂದಾಗಿ ಪ್ರಯಾಣಿಸುವ ಸಂದರ್ಭದಲ್ಲಿ ಅವರು ಹಾಗೂ ನಮ್ಮೆಲ್ಲರ ಭರವಸೆಯ ತಾಯಿಯಾಗಿರುವ ಮಾತೆ ಮರಿಯಮ್ಮನವರ ಮಧ್ಯಸ್ಥಿಕೆಗೆ ನಮ್ಮೆಲ್ಲಾ ಕೋರಿಕೆಗಳನ್ನು ಅರ್ಪಿಸುತ್ತಾ, ಪ್ರಾರ್ಥಿಸೋಣ. (ಹದಿನಾರನೇ ಸಾಮಾನ್ಯ ಸಾರ್ವತ್ರಿಕ ಸಿನೋಡ್ ವರದಿ, ಪಯಣದೊಂದಿಗೆ ನಡೆಯುವುದು).

**ಪ್ರಾರ್ಥನೆ**

**ಸರ್ವಶಕ್ತ ತಂದೆಯಾದ ದೇವರೇ,**
**ಸ್ವರ್ಗ ಸಾಮ್ರಾಜ್ಯದೆಡೆಗೆ ನಡೆಯುತ್ತಿರುವ ನಾವು**
**ನಿಮ್ಮ ಯಾತ್ರಿಕ ಧರ್ಮಸಭೆಯಾಗಿದ್ದೇವೆ.**
**ನಮ್ಮ ತಾಯ್ನಾಡಿನಲ್ಲಿ ಅನ್ಯ ದೇಶಿಕರಂತೆ**
**ನಾವು ಜೀವಿಸುತ್ತಿದ್ದೇವೆ.**
**ಪ್ರತಿ ಅನ್ಯ ದೇಶವು ನಮ್ಮ ತಾಯ್ನಾಡಾಗಿರುವಂತೆ**
**ನಮ್ಮ ತಾಯ್ನಾಡೂ ಸಹ ನಮಗೆ ಅನ್ಯ ದೇಶವಾಗಿದೆ.**

**ನಾವು ಜಗತ್ತಿನಲ್ಲಿ ಜೀವಿಸುತ್ತಿದ್ದರೂ ಸಹ**
**ನಮ್ಮ ನಿಜವಾದ ಮನೆ ಸ್ವರ್ಗ ಸಾಮ್ರಾಜ್ಯವಾಗಿದೆ.**
**ಕ್ಷಣಿಕದಂತೆ ನೀವು ನಮಗೆ ನೀಡಿರುವ ಈ ಭೂಮಿಯ**
**ಭಾಗವನ್ನು ನಮ್ಮದು ಎಂಬ ಭಾವನೆಯಿಂದ ಆವರಿಸಿಕೊಳ್ಳದಂತೆ ಮಾಡಿರಿ.**
**ನಮ್ಮ ವಲಸಿಗ ಸಹೋದರ ಸಹೋದರಿಯರ ಜೊತೆಗೆ**
**ಒಂದಾಗಿ ಮುಂದೆ ಸಾಗಲು, ನೀವು ನಮಗಾಗಿ ಸಿದ್ಧಪಡಿಸಿರುವ**
**ನಿತ್ಯಧಾಮದೆಡೆಗೆ ನಡೆಯಲು ನೆರವಾಗಿರಿ.**
**ನಾವು ಭೇಟಿ ಮಾಡುವ ಎಲ್ಲರಲ್ಲೂ ನಿಮ್ಮ ಪುತ್ರರೂ**
**ಹಾಗೂ ನಮ್ಮ ರಕ್ಷಕರೂ ಆದ ಕ್ರಿಸ್ತರನ್ನು ಕಾಣಲು**
**ನಮಗೆ ನೆರವಾಗಿರಿ, ಆಮೆನ್.**

(ರೋಮ್, ಸೇಂಟ್ ಜಾನ್ ಲ್ಯಾಟರನ್, ಮೇ 24, 2024, ಕ್ರೈಸ್ತರ ಸಹಾಯಮಾತೆ ಮರಿಯಮ್ಮನವರ ಸ್ಮರಣೆ).

**ಪೋಪ್ ಫ್ರಾನ್ಸಿಸ್**